ನೋಡುವುದಿಲ್ಲ ಎಂದು. ಯಾರಿಗೆ ಈ ತುರ್ತುಪರಿಸ್ಥಿತಿ ಕಾಲದಲ್ಲಿ 20 ಅಂಶಗಳ ಕಾರ್ಯಕ್ರಮದಲ್ಲಿ ನಂಬಿಕೆ ಇದೆಯೋ, ಮತ್ತು ಅಧಿಕಾರಿಗಳ ಜೊತೆಯಲ್ಲಿ ಸಹಕರಿಸಿ ಕೆಲಸ ಮಾಡುತ್ತಾರೆಯೋ, ಅಂತಹವರು ಸಹಾನುಭೂತಿಯಿಂದ ಮುಂದೆ ಬಂದರೆ, ನೇಮಿಸುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಕೆಲವು ತಾಲ್ಲೂಕು ಬೋರ್ಡುಗಳು ಸೂಪರ್‌ಸೀಡ್ ಆಗುವುದಕ್ಕಿಂತ ಮುಂಚೆ ವಿರೋಧಪಕ್ಷದವರ ಕೈಯಲ್ಲಿದ್ದು, ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಯಾವುದೇ ವಿಧವಾದ ದೂರುಗಳು ಸರ್ಕಾರಕ್ಕೆ ಬಂದಿಲ್ಲ. ಅಂತಹವರನ್ನು ಈ ಸಲಹಾ ಸಮಿತಿಗಳಲ್ಲಿ ನದಸ್ಯರನ್ನಾಗಿ ನೇಮಿಸುತ್ತೀರಾ ?

ಶ್ರೀ ಎನ್. ರಾಚಯ್ಯ—ನಾನು ಬೇರೆಯವರು ಕೆಲಸ ಚೆನ್ನಾಗಿ ಮಾಡಲಿಲ್ಲ ಎಂದು ಹೇಳಲಿಲ್ಲ. ಸಮಿತಿಯಲ್ಲಿ ನದಸ್ಯರನ್ನಾಗಿ ನೇಮಕಮಾಡುವಾಗ, ಡೆಡಿಕೇಟೆಡ್ ಮೈಂಡ್ ಮತ್ತು ಕಮ್ಯುನಿಕೇಟೆಡ್ ಮೈಂಡ್ ಯಾರಿಗಿದೆಯೋ ಅಂತಹವರನ್ನು ನೇಮಿಸುತ್ತೇವೆಂದು ಸ್ಪಷ್ಟವಾಗಿ ಹೇಳುತ್ತೇನೆ.

1-30 P.M.

ಶ್ರೀ ಕೆ. ಹೆಚ್. ಹನುಮೇಗೌಡ.—ಅಧ್ಯಕ್ಷರೇ, ತುರ್ತುಪರಿಸ್ಥಿತಿ ಘೋಷಣೆ ಆದಮೇಲೂಕೂಡ ಅನೇಕ ಸಂಘ ಸಂಸ್ಥೆಗಳಿಗೆ, ತಮಗೆ ಬೇಕಾದ ಸಂಸ್ಥೆಗಳಿಗೆ ಚುನಾವಣೆ ನಡೆಸುತ್ತಾರೆ, ಬೇಡವಾದವಕ್ಕೆ ಚುನಾವಣೆ ನಡೆಸುವುದಿಲ್ಲ. ಇದು ಯಾವ ನ್ಯಾಯ ? ಯಾವ ಸಂಘ ಸಂಸ್ಥೆಗಳಿಗೂ ಚುನಾವಣೆ ಮಾಡದೇ ಹೋದರೆ ಅದು ಬೇರೆ ವಿಷಯ. ತಮಗೆ ಬೇಕಾದ ಸಂಘ ಸಂಸ್ಥೆಗಳಿಗೆ ಚುನಾವಣೆ ನಡೆಸುವುದಕ್ಕೆ ಅವಕಾಶ ಕೊಟ್ಟಿರುವುದಾದರೆ ಈ ತಾಲ್ಲೂಕು ಬೋರ್ಡ್ ಚುನಾವಣೆಗೂ ಏತಕ್ಕೆ ಅವಕಾಶ ಕೊಡಬಾರದು ?

ಶ್ರೀ ಎನ್. ರಾಚಯ್ಯ.—ನನಗೆ ಸಂಬಂಧಪಟ್ಟದ್ದು ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡ್‌ಗಳು. ಈ ಬಗ್ಗೆ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಈ ತುರ್ತುಪರಿಸ್ಥಿತಿಯಲ್ಲಿ ಇದರ ಚುನಾವಣೆಯನ್ನು ಮುಂದೂಡಬೇಕೆಂದು ಆಗಿದೆ. ಈ ಬಗ್ಗೆ ಒಂದು ಮಾನೂಪೆಯೂ ಕೂಡ ಸಭೆಯ ಮುಂದೆ ಬರುತ್ತಾ ಇದೆ. ನನ್ನ ಇಲಾಖೆಗೆ ಸಂಬಂಧಪಟ್ಟಂಥ ತೀರ್ಮಾನದ ವಿಚಾರ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದೇ ನದನದಲ್ಲಿ ಇದೇ ನಚಿವರು ಆಡ್ವೈಸರಿ ಕಮಿಟಿಯನ್ನು ನೇಮಿಸುವುದಿಲ್ಲ ಎಂದು ಹೇಳಿದ್ದಾರೆ. ಇದು ನಿಜವಾದ ಮಾತು. ಈ ಮಾತನ್ನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ಎನ್. ರಾಚಯ್ಯ.—ನಾನು ಚುನಾವಣೆಗಳನ್ನು 1975ನೇ ಇನವಿಯ ಡಿಸಂಬರ್ ಅಂತ್ಯದಲ್ಲಿ ಮಾಡುತ್ತೇವೆ ಎಂದು ಹೇಳಿದ್ದೂ ನಿಜ ಮತ್ತು ನಲಹಾ ಸಮಿತಿಗಳನ್ನು ಮಾಡುವುದಿಲ್ಲ ಎಂದು ಹೇಳಿದ್ದೂ ನಿಜ, ಕಾನೂನು ಬದ್ಧವಾಗಿದ್ದರೂ ಕೂಡ ಮಾಡುವುದಿಲ್ಲ ಎಂದು ಹೇಳಿದ್ದೇನೆ. ಆದರೆ ತುರ್ತುಪರಿಸ್ಥಿತಿ ಬಂದಮೇಲೆ ಸ್ವಲ್ಪ ಬದಲಾವಣೆಯಾಗಿದೆ. ಮಂತ್ರಿಮಂಡಲದ ತೀರ್ಮಾನ ಮತ್ತು ಪಕ್ಷದ ತೀರ್ಮಾನದ ಪ್ರಕಾರ ಇದರ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೇವೆ. ಇದು ಸ್ಪಷ್ಟವಾದ ವಿಷಯ.

**(ii) *re : Harassment to Public at Sagar in Making Collections or National Saving.***

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ರಾಷ್ಟ್ರೀಯ ಉಳಿತಾಯಕ್ಕಾಗಿ ಹಣವನ್ನು ಸಂಗ್ರಹಿಸಲು ಸಾಗರದ ಅಸಿಸ್ಟೆಂಟ್ ಕಮೀಷನರ್ ಹಾಗೂ ತಹಸೀಲ್ದಾರರು ಸಾರ್ವಜನಿಕರಿಗೆ ಕಿರುಕುಳವನ್ನು ಕೊಡುತ್ತಿರುವ ವಿಚಾರದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಮಂತ್ರಿಗಳು).—ಅಧ್ಯಕ್ಷರೇ, ಈಗ ಮಾನ್ಯ ಕಾಗೋಡು ತಿಮ್ಮಪ್ಪನವರು ಏನು ಒಂದು ಕಾಲಿಂಗ್ ಅಟೆನ್‌ಷನ್ ಕೇಳಿದ್ದಾರೆ ಇದು ನನ್ನೆ ದಿವಸ

ನೋಡಿದರೆ ಇದರ ಬಗ್ಗೆ ಒಂದು ಹೇಳಿಕೆ ಕೊಡಬೇಕಾಗಿತ್ತು ಅಂತು ಈಗ ತಮ್ಮ ಅಪ್ಪಣೆ ಪಡೆದು ಇದರ ಬಗ್ಗೆ ಹೇಳಬೇಕಾದರೆ ಒಂದು ವಿಷಯ ಇದೆ ಅದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದು ಎನ್.ಎಸ್.ಎಸ್. ಕಲೆಕ್ಷನ್‌ಗಳ ಸಂಬಂಧಪಟ್ಟಿದ್ದಲ್ಲ. 2-2-1976ನೇ ತಾರೀಖು ಕರಿಯಪ್ಪ ಅನ್ನುವ ಒಬ್ಬ ವರ್ತಕನಲ್ಲಿ ಲೈಸನನ್ಸ್‌ನ್ನೂ ಮತ್ತು ಬಿಲ್‌ನ್ನೂ ಮತ್ತು ಸ್ಟಾಕ್ ರಿಜಸ್ಟರ್‌ನ್ನು ತೋರಿಸಬೇಕು ಎಂದು ಫುಡ್ ತಾಸೀಲ್ದಾರ್‌ರವರು ಕೇಳಿದರು. ಅದನ್ನು ವೆರಿಫೈ ಮಾಡಬೇಕು ಎಂದು ಕೇಳಿದಾಗ ಅತ ಅದನ್ನು ಕೊಡಲಿಲ್ಲ. ಅಲ್ಲದೆ ಅವನು ಕಮಾಡಿಟೀಸ್‌ನ ಒಂದು ಬೋರ್ಡ್‌ನ್ನಾಗಲಿ ಮತ್ತು ಅದರ ಒಂದು ರೇಟನ್ನಾಗಲಿ ಮತ್ತು ಎಷ್ಟು ಸ್ಟಾಕ್ ಇದೆ ಅನ್ನುವುದಾಗಲಿ ಹಾಕರಲಿಲ್ಲ. ಅದುದರಿಂದ ಅವರ ಮೇಲೆ ಈ ಒಂದು ಕೇಸ್ ಹಾಕಿದ್ದಾರೆ. ಫುಡ್ ತಾಸೀಲ್ದಾರರವರು ಇದರ ಬಗ್ಗೆ ಕೇಳ್ದವುದಕ್ಕೆ ಹೋದಾಗ ಅಲ್ಲಿ ಈ ವಿಷಯ ಎತ್ತಿದಾಗ ಅಂಗಡಿಯಲ್ಲಿ ಇದ್ದಂಥ ಜನಗಳು ಅವನ ಮೇಲೆ ಕೈ ಮಾಡಿದ್ದಾರೆ. ಆ ಸಂದರ್ಭದಲ್ಲಿ ಡಿಪ್ಯೂಟಿ ತಾಸೀಲ್ದಾರರು ಏನು ಮಾಡಿದರು ಎಂದರೆ ಕೂಡಲೇ ಆ ಒಂದು ಪರಿಸ್ಥಿತಿಯನ್ನು ಹತೋಟಿಗೆ ತರಲು ಅಸಿಸ್ಟೆಂಟ್ ಕಮೀಷನರ್‌ಗೆ ತಿಳಿಸಿದರು ಆ ಸ್ಥಳಕ್ಕೆ ಕೂಡಲೇ ಪೋಲೀಸ್ ಸಮೇತ ಬಂದು ಅಲ್ಲಿ ನಡೆದಿರತಕ್ಕಂಥಾ ಅವಾಚಾರಗಳನ್ನು ವಿಚಾರಿಸಿ ಮುಂದಿನ ಕ್ರಮ ತೆಗೆದುಕೊಂಡು ಅವನ ಮೇಲೆ ಐಪಿಸಿ 186 ಮತ್ತು 353ನೇ ಸೆಕ್ಷನ್ ಪ್ರಕಾರ ಛಾರ್ಜ್‌ಶೀಟ್ ಹಾಕಿದ್ದಾರೆ. ಈಗ ಅದು ಜುಡಿಷಿಯಲ್ ಮ್ಯಾಜಿಸ್ಟ್ರೀಟ್ ಕೋರ್ಟ್‌ನಲ್ಲಿ ಪೆಂಡಿಂಗ್ ಇದೆ. ಆದುದರಿಂದ ಮಾನ್ಯ ಸದಸ್ಯರು ಕೇಳಿರತಕ್ಕಂಥಾ ಗಮನ ಸೆಳೆಯುವ ಸೂಚನೆಗೂ ಎನ್.ಎಸ್.ಎಸ್.ಗೂ ಸಂಬಂಧಪಟ್ಟಿದ್ದಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ನಾನು ಇದನ್ನು ಯಾವರೀತಿ ಹೇಳಬೇಕೋ ಗೊತ್ತಿಲ್ಲ. ಅಸಿಸ್ಟೆಂಟ್ ಕಮೀಷನರು ಸ್ಥಳಕ್ಕೆ ಹೋಗಿದ್ದಾರೆ ಅನ್ನುವ ಮಾತನ್ನು ಹೇಳಿದ್ದಾರೆ. ನಾನು ತಿಳಿದಿರುವ ಪ್ರಕಾರ ಅವರು ರಾಷ್ಟ್ರೀಯ ಉಳಿತಾಯ ಯೋಜನೆಯ ಹಣ ಸಂಗ್ರಹಕ್ಕಾಗಿ ಹೋಗಿದ್ದರು. ಹಾಗೆ ಹೋಗಿ ಅವರು ಅವನನ್ನು ಹಣ ಕೇಳಿದಾಗ ಅವನು ಒಂದು ರೀತಿಯ ಧೋರಣೆ ತಾಳಿರಬಹುದು, ನನ್ನ ಕಷ್ಟ ಹೀಗೆ ಇದೆ, ಹಾಗೆ ಇದೆ ಎಂದು ಹೇಳಿದ. ಅಂಥಾ ಪ್ರಕರಣಗಳೂ ಕೂಡ ಕೆಲವು ಇದೆ. ಅಂಥಾದ್ದರಲ್ಲಿ ಅವನಿಗೆ ಬುದ್ಧಿ ಕಲಿಸುವುದಕ್ಕೆ ಈ ರೀತಿ ಮಾಡಿರಬಹುದು. ನಾವೂನು ಲಿಸ್ಟ್ ಕೊಡು ಎಂದು ಕೇಳಿ ಯಾರನ್ನೋ ಕಳುಹಿಸಿ ಅಂಗಡಿಯನ್ನು ಮುಚ್ಚಿಸಿದ್ದಾರೆ. ಅವನ ಅಂಗಡಿಯಲ್ಲಿರತಕ್ಕಂಥಾ ಸಾಮಾನುಗಳನ್ನು ಹೊರಗೆ ಹಾಕಿಸಿದ್ದಾರೆ. ನಿಜವಾಗಿಯೂ ಹೇಳುವುದಾದರೆ ಅವರು ಈ ಒಂದು ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಅವನಿಗೆ ಏನಾದರೂ ಮಾಡಬೇಕು ಅಂತ ಮಾಡಿದ್ದಾರೆ. ತಾವು ಇದಕ್ಕೆ ಅವಕಾಶ ಕೊಡಬೇಡಿ ಎಂದು ಕೇಳುತ್ತೇನೆ. ಅಲ್ಲದೆ ಈ ಎನ್.ಎಸ್.ಎಸ್.ಗೆ ಎಲ್ಲರೂ ದುಡ್ಡು ಕೊಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವರು ಕೊಡದೇ ಇರುವವರೂ ಇದ್ದಾರೆ. ಆದುದರಿಂದ ನಾನು ಹೇಳುವುದು ಏನೆಂದರೆ ಇಂಥಾ ಸನ್ನಿವೇಶದಲ್ಲಿ ಅಧಿಕಾರಿಗಳು ಯಾವ ರೀತಿಯಾಗಿ ಅವರಲ್ಲಿ ನಡೆದುಕೊಳ್ಳಬೇಕು ಎನ್ನುವುದು ಮುಖ್ಯ. ಇಲ್ಲದೇಹೋದರೆ ಅಪಾಯವಾಗುತ್ತದೆ. ತಾವು ಈಗ ಏನು ರಿಪೋರ್ಟ್ ತರಿಸಿಕೊಂಡಿದ್ದೀರಿ ಆದರ ಮೇಲೆ ಒಂದು ತೀರ್ಮಾನಕ್ಕೆ ಬರಬೇಕಿದೆ. ಡಿಪ್ಯೂಟಿ ಕಮೀಷನರು ನೆನ್ನೆ ದಿವಸ ಅಲ್ಲಿಗೆ ಹೋಗಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಥವಾ ಡಿವಿಷನಲ್ ಕಮೀಷನರ್‌ಗಾದರೂ ತಿಳಿಸಿ. ನಾನು ಕೇಳುವುದು ಇದನ್ನು ಇನ್ನೊಂದುಸಾರಿ ಪರಿಶೀಲನೆ ಮಾಡಿ. ಅಸಿಸ್ಟೆಂಟ್ ಕಮೀಷನರ್ ಹದ್ದುಮೀರಿ ಇದರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತಾರೆ. ಆದುದರಿಂದ ಇದರ ಬಗ್ಗೆ ನರಿಯಾಗಿ ಯೋಚನೆ ಮಾಡಿ ಇದು ಸರಿಯಾಗಿದ್ದರೆ ಹಾಗೆಯೇ ಮಾಡಿ. ಅದುಬಿಟ್ಟು ತಾವು ಈ ವರದಿಯಂತೆ ಮಾಡಿದರೆ ಕಷ್ಟವಾಗುತ್ತದೆ. ಒಟ್ಟಿನಲ್ಲಿ ನಾನು ಹೇಳುವುದು ಈ ವರದಿಯಲ್ಲಿ ತಾವು ಏನು ತಿಳಿಸಿದ್ದೀರಿ ಇದು ನತ್ಯಕ್ಕೆ ದೂರವಾದದ್ದು ಎಂದು ಇಷ್ಟು ಮಾತ್ರ ಹೇಳುತ್ತೇನೆ. ದಯವಿಟ್ಟು ನನ್ನನ್ನು ನಂಬಿ ಎಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ನಂಬುತ್ತೇನೆ. ಆದರೆ ಅಲ್ಲ ನಡೆದಿರತಕ್ಕಂಥಾ ವಿದ್ಯಾಮಾನಗಳನ್ನೂ ಕೂಡ ಈ ಸಭೆಯಲ್ಲಿ ಇಟ್ಟಿದ್ದೇನೆ. ಇದರ

ಹಿನ್ನೆರೆ ಬೇರೆ ರೀತಿಯಾಗಿದೆ ಎಂದು ಮಾನ್ಯ ಸದಸ್ಯರು ಈಗ ತಿಳಿಸಿದ್ದಾರೆ. ನಾನು ಡೆಪ್ಯೂಟಿ ಕಮೀಷನರನ್ನು ಕಳುಹಿಸಿ ಈ ಬಗ್ಗೆ ಇನ್ನೂ ಹೆಚ್ಚು ಹೆಚ್ಚು ಅಂತಗಳನ್ನು ಸಂಗ್ರಹಮಾಡಿ ತಿಳಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಈ ಪೊತ್ತು ಹೋಗುತ್ತೇನೆ. ನೀವೂ ಕೂಡ ನನ್ನ ಜೊತೆಯಲ್ಲಿ ಬಂದರೆ ಅಲ್ಲಿ ನಡೆದಿರತಕ್ಕಂಥ ವಿದ್ಯಾಮಾನಗಳನ್ನು ಪರಿಶೀಲಿಸಿ ಒಂದು ತೀರ್ಮಾನ ತೆಗೆದುಕೊಳ್ಳೋಣ.

ಶ್ರೀ ಎನ್. ಹುಚ್ಚಮಾಸ್ತಿಗೌಡ.---ಈ ಪಕ್ಷದವರು ಇದನ್ನು ದುರುಪಯೋಗ ಮಾಡುತ್ತಾರೆ ಎನ್ನುವ ಶಂಕೆ ಅವರಿಗೆ ಬಂದಿದೆ. ಅದಕ್ಕೆ ಮಾನ್ಯ ಸದಸ್ಯರು ಈ ಮಾತನ್ನು ಹೇಳುತ್ತಿದ್ದಾರೆ.

SRI KAGODU THIMMAPPAY.—The Merchants' Association has submitted a representation. But I don't have any representative from my party there. I am the last man to do such things.

## BANGALORE DEVELOPMENT AUTHORITIES BILL, 1976.

### *INTRODUCTION*

SRI D. K. NAIKAR (Minister for Law and Municipal Administration [On behalf of the Chief Minister].—I move for leave to introduce.

"The Bangalore Development Authorities Bill, 1976."

MADAM SPEAKER —The question is :

"That leave be granted to introduce the Bangalore Development Authorities Bill, 1976."

*The motion was adopted and the leave granted*

SRI D. K. NAIKAR.—I introduce :

"The Bangalore Development Authorities Bill, 1976."

MADAM SPEAKER.—The Bill is introduced. * *

## AGRICULTURAL PRODUCE MARKETING (REGULATION) (AMENDMENT) BILL, 1976

### *INTRODUCTION*

SRI R. D. KITTUR (Minister of State for Regulated Markets) : On behalf of the Minister for Co-operation, I move for leave to introduce:

"The Agricultural Produce Marketing (Regulation) (Amendment) Bill, 1976."

MADAM SPEAKER —The question is :

"That leave be granted to introduce the Agricultural Produce Marketing (Regulation) (Amendment) Bill, 1976."

*The motion was adopted and the leave granted*

---

* * Bills appended as Annexures to this Volume.